ಶ್ರೀ ಬಿ. ಮುನಿಯಪ್ಪ : ಅಂಥ ಸಂಸ್ಥೆ ಇಂದ ಚುನಾಯಿತರಿರಬೇಕೆಂದು ಇದ್ದರೂ ಇವರು ನಾಮಿನೇಷನ್ ಮಾಡಿದ್ದಾರೆ. ಚಿಕ್ಕಬಳ್ಳಾಪುರದಲ್ಲಿ ಮೂರು ಜನರನ್ನು ಸರಕಾರದ ಪರವಾಗಿ ನಾಮನಿರ್ದೇಶನ ಮಾಡಿದ್ದರು. ಮತ್ತೆ ನಾಳೆ ಚುನಾವಣೆ ಇರುವಾಗ ಇನ್ನೊಬ್ಬರನ್ನು ನಾಮನಿರ್ದೇಶನ ಮಾಡಿದರು. ಅದು ಯಾವ ಪ್ರಾವಿಷನ್ ಮೂಲಕ ಅಂದರೆ, ಕೃಷಿ ಸಂಸ್ಕರಣ ಸಂಸ್ಥೆಗಳ ಮುಖಾಂತರ ಎಂದು ಹೇಳಿದರು. ಅದು ನಿಜಕ್ಕೂ ಕೆಲಸವನ್ನು ಮಾಡುತ್ತಿಲ್ಲ. ಹೀಗೆ ಕಡೆ ದಿನದಲ್ಲಿ ನಾಮಿನೇಷನ್ ಮಾಡುವುದು ಯಾವ ನಿಯಮದ ಅಡಿಯಲ್ಲಿ? ಅದರ ಬಗ್ಗೆ ಸರಕಾರದವರು ವಿವರಗಳನ್ನು ಕೊಡಬೇಕು.

ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರ ಸಚಿವರು ಇಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಮಾರುಕಟ್ಟೆ ಶುಲ್ಕದ ರೂಪದಲ್ಲಿ ವಸೂಲಾದ ಭಾರೀ ಮೊತ್ತದ ಸಾರ್ವಜನಿಕ ನಿಧಿಗಳನ್ನು ಮಾರುಕಟ್ಟೆ ಸಮಿತಿಗಳು ನಿರ್ವಹಿಸುವುದರಿಂದ ವಿವಿಧ ಕಾರ್ಯಚಟುವಟಿಕೆಗಳಿಗೆ ನಿಧಿಯನ್ನು ಸೂಕ್ತ ರೀತಿಯಲ್ಲಿ ಬಳಸುವುದಕ್ಕೆ ರಚನಾತ್ಮಕವಾದಂಥ ಮಾರ್ಗದರ್ಶನ ಮತ್ತು ಜಾಗರೂಕತೆಯ ಅವಶ್ಯಕತೆಯು ಇದೆ ಎಂದು ಹೇಳಿದ್ದಾರೆ. ಅಂದರೆ, ಅಲ್ಲಿ ಚುನಾಯಿತ ಪ್ರತಿನಿಧಿಗಳಿಲ್ಲರೂ ಅಜಾಗರೂಕತೆಯಿಂದ ಇರುವವರು ಮತ್ತು ಅವ್ಯವಹಾರವನ್ನು ಮಾಡುವವರು ಎಂಬ ವಿಚಾರ ಸರಕಾರದಲ್ಲಿದೆಯೇ? ಈ ಸರಕಾರಕ್ಕೆ ಪ್ರಜಾಪ್ರಭುತ್ವದ ಮೇಲೆ ಭರವಸೆ ಇದೆಯೇ? ಈ ರೀತಿಯಲ್ಲಿ ಹೇಳಿಕೆಗಳನ್ನು ಕೊಟ್ಟು ನಾಮಿನೇಷನ್ ಮಾಡುವುದು ತೀರಾ ನಾಚಿಕೆಗೇಡಿತನದ ಸಂಗತಿ ಮತ್ತು ಈ ನೀತಿಯು ಸರಿ ಅಲ್ಲ. ಚುನಾಯಿತ ಪ್ರತಿನಿಧಿಗಳಿಗೆ ಅವಮಾನ ಮಾಡುವ ರೀತಿಯಲ್ಲಿ ಕೊಟ್ಟಿರುವ ಹೇಳಿಕೆಯು ಸರಿಯಲ್ಲ. ಆದ್ದರಿಂದ ಇದನ್ನು ವಾಪಸ್ ಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರಕಾರಕ್ಕೆ ಇಷ್ಟೊಂದು ಅಧಿಕಾರದ ದಾಹ ಇದ್ದರೆ ಆಗಿರುವಂಥ ಚುನಾವಣೆಯನ್ನು ರದ್ದು ಮಾಡಲಿ. ಈ ಮೂರು ಜನರ ಜೊತೆಗೆ ಇನ್ನೂ ಹತ್ತು ಜನರನ್ನು ನಾಮಿನೇಷನ್ ಮಾಡಿಸಿಕೊಂಡು ನೀವೇ ನಡೆಸಿಕೊಂಡು ಹೋಗಿ. ರೂಲಿಂಗ್ ಪಾರ್ಟಿಯವರೇ ಎಲ್ಲಾ ಸಂಘಸಂಸ್ಥೆಗಳಲ್ಲಿಯೂ ಇರಬೇಕೆಂದು ಮಾಡಿಕೊಳ್ಳಿ. ಅದಕ್ಕೆ ನಮ್ಮ ಅಭ್ಯಂತರವಿಲ್ಲ, ನಾವು ಎಲ್ಲಿಗೂ ಬರುವುದಿಲ್ಲ. ನಾವು ನಿಮಗೆ ಯಾವ ಭಾಷೆಯಲ್ಲಿ ಚೀಮಾರಿ ಹಾಕೋಣ? ಇದನ್ನು ನಾವು ಪ್ರತಿಭಟಿಸುತ್ತೇವೆ.

ಅಧ್ಯಕ್ಷರು : ಅವರು ತಮ್ಮ ಉತ್ತರವನ್ನು ಹೇಳಲಿ.

(ಬಿಜೆಪಿ ಪಕ್ಷದ ಮಾನ್ಯ ಸದಸ್ಯರುಗಳು ಸಭಾತ್ಯಾಗ ಮಾಡಿದರು)

2.20 ಪಿ.ಎಂ

ಗೊಂದಲ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ ಇದನ್ನು ಮತಕ್ಕೆ ಹಾಕಿ.